**ಪಾಠ 1 ಸೆಪ್ಟೆಂಬರ್ 29 ಅಕ್ಟೋಬರ್ 5**

# ಸೃಷ್ಟಿ ಮತ್ತು ಬೀಳೋಣ



**ಸಬ್ಬತ್ತಿನ ಮದ್ಯಾಹ್ನ:**

**ಈ ವಾರದ ಅಭ್ಯಾಸಕ್ಕೆ ಓದಿರಿ:** ಆದಿ 1:26, 27; 1ಯೋಹಾನ 4:7,8,16; ಆದಿಕಾಂಡ 3:16–19, ಆದಿಕಾಂಡ 11:1–9, ಗಲಾ 3:29, ಧರ್ಮಾ 7:6–11.

**ಸ್ಮರಣವಾಕ್ಯ: "ದೇವರು ಅಬ್ರಾಮನನ್ನು ಹೊರಗೆ ಕರತಂದು ಆಕಾಶದ ಕಡೆಗೆ ನೋಡು, ನಕ್ಷತ್ರಗಳನ್ನು ಲೆಕ್ಕಿಸುವುದು ನಿನ್ನಿಂದಾದರೆ ಲೆಕ್ಕಿಸು; ನಿನ್ನ ಸಂತಾನವು ಅಷ್ಟಾಗುವುದು ಅಂದನು. ಅಬ್ರಾಮನು ಯೆಹೋವನನ್ನು ನಂಬಿದನು; ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು."** (ಆದಿಕಾಂಡ 15:5,6)

ದೇವಜನರ ಕತೆಯು ಮಾನವರ ಸೃಷ್ಟಿ ಮತ್ತು ಅವರ ನಾಶಕರವಾದ ಪಾಪದಲ್ಲಿ ಬೀಳೋಣದಿಂದಲೇ ಆರಂಭಿಸಿದ. ದೇವರ ಸಭೆಯಲ್ಲಯ ಐಕ್ಯತೆಯನ್ನು ಅರ್ಥಮಾಡಿಕೊಳ್ಳಬೇಕಾದರೆ, ದೇವರು ಮಾನವನರನ್ನು ಸೃಷ್ಟಿಸಿದ ಮೂಲ ಉದ್ದೇಶ ಮತ್ತು ಮಾನವನು ಪಾಪದಲ್ಲಿ ಬಿದ್ದ ನಂತರ ಅವರನ್ನು ಪುನಃ ಸ್ಥಾಪಿಸುವ ಅವಶ್ಯಕತೆಯನ್ನು ಅರ್ಥಮಾಡಿಕೊಳ್ಳಬೇಕು. ಸತ್ಯವೇದದ ಮೊದಲ ಅಧ್ಯಾಯದಲ್ಲಿ ವ್ಯಕ್ತವಾಗುವ ವಿಷಯ ದೇವರು ಇಡೀ ಮಾನವಕುಲ ಒಂದೇ ಕುಟುಂಬವಾಗಿ ಐಕ್ಯತೆಯಿಂದ ಉಳಿಯಬೇಕೆಂದು ಇಚ್ಛಿಸಿದ್ದನು. ದೂರದೃಷ್ಟಿ, ಈ ಐಕ್ಯತೆ ಪಾಪದ ದುರ್ಘಟನೆಯ ನಂತರ ಒಡೆದು ಹೋಯಿತು. ಪಾಪದಿಂದಲೇ ವಿಭಜನೆ ಮತ್ತು ಅನೈಕ್ಯತೆ ಬೇರು ಬಿಟ್ಟವು, ಅವಿಧೇಯತೆಯ ಕೆಟ್ಟ ಪರಿಣಾಮಗಳೂ ಕಂಡುಬಂದವು.

ಆದಾಮ ಹವ್ವಳು ನಿಷೇದಿಸಲ್ಪಟ್ಟ ಹಣ್ಣನು ತಿಂದಾಕ್ಷಣ, ದೇವರು ಬಂದು ಆದಾಮ ಹವ್ವಳನ್ನು ವಿಚಾರಿಸಿದಾಗ ಅವರೀರ್ವರ ನಡವಿನ ತಕ್ಷಣದ ವರ್ತನೆರ ಅವರಲ್ಲಿ ಹುಟ್ಟಿದ ಭೇದಬಾವವನ್ನು ತೋರಿಸುತ್ತದೆ. (ಆದಿ 3:11 ನೋಡಿರಿ) ಆದ್ದರಿಂದ ರಕ್ಷಣೆ ಯೋಜನೆಯು ಸ್ಥಾಪಿಸುವ ಎಲ್ಲ ಕಾರ್ಯಗಳಲ್ಲಿ ಈ ಮೂಲ ಐಕ್ಯತೆಯನ್ನು ಪುನಃ ಸ್ಥಾಪಿಸುವದು ಒಂದು ಪ್ರಾರ್ಥನೆ ಗುರಿಯಾಗಿದೆ.

ಅಬ್ರಹಾಮನು ದೇವಜನರಿಗೆ ಮೂಲತಂದೆ, ದೇವರ ರಕ್ಷಣಾ ಯೋಜನೆಯಲ್ಲಿ ಅವನೊಬ್ಬ ಪ್ರಧಾನ ಸೂತ್ರಧಾರಿ ಸತ್ಯವೇದದಲ್ಲಿ ಅಬ್ರಹಾಮನನ್ನು " ನಂಬಿಕೆಯಿಂದಲೇ ನೀತಿ" ಎಂಬ ಸಿದ್ಧಾಂತಕ್ಕೆ ಉತ್ತಮ ಸಾಕ್ಷಿಯನ್ನಾಗಿ ಗುರುತಿಸಲಾಗಿದೆ (ರೋಮ 4:1–5). ಈ ನಂಬಿಕೆ ಎಂಥದ್ದೆಂದರೆ ದೇವ ಜನರನ್ನು ಪರಸ್ಪರ ಒಂದಾಗಿ ಬೆಸೆಯುವದಲ್ಲದೆ ದೇವರೊಡನೆಯೂ ಐಕ್ಯಗೊಳಿಸುವಂಥದ್ದಾಗಿದೆ. ದೇವರು ತನ್ನ ಜನರ ಮೂಲಕ ಈ ಐಕ್ಯತೆಯನ್ನು ಪುನಃ ಸ್ಥಾಪಿಸಲು ಮತ್ತು ಬಿದ್ದು ಹೋದ ಜನಾಂಗಕ್ಕೆ ತನ್ನ ಚಿತ್ತವನ್ನು ತಿಳಿಸಲು ಕಾರ್ಯ ಸಾಧಿಸುತ್ತಾನೆ.

**ಭಾನುವಾರ** **ಸೆಪ್ಟೆಂಬರ್ 30**

**ಐಕ್ಯತೆಯ ತಳಹದಿಯಾಗಿ ಪ್ರೀತಿ.**

ಆದಿಕಾಂಡ 1 ಮತ್ತು 2ನೇ ಅಧ್ಯಾಯಗಳಲ್ಲಿಯ ಸೃಷ್ಠಿಯ ವಿವರಣೆಯಿಂದ ಹರಿದು ಬರುವ ಸೃಷ್ಠಿಯ ಸಂಗತಿ, ಸೃಷ್ಠಿಯ ವಾರದ ಸರ್ವ ಸೃಷ್ಠಿಯಲ್ಲಿ ಇರುವ ಹೊಂದಿಕೆ ಅಥವಾ ಒಗ್ಗಟ್ಟು. ದೇವರ ಕೊನೆಯ ವಾಕ್ಯ, "ಎಲ್ಲವೂ ಸುಂದರವಾಗಿತ್ತು" ಎನ್ನುವಾಗ ಅದು ಹೊರನೋಟದ ಸೌಂದರ್ಯ ಮಾತ್ರವಲ್ಲ, ದೇವರ ಸೃಷ್ಠಿ ಕಾರ್ಯ ಮುಗಿಸಿದಾಗ ಯಾವದರಲ್ಲಿಯೂ ಒಂದು ಕ್ಷಣ ದೋಷ ಅಥವಾ ಕೆಟ್ಟದು ಅಥವಾ ಹೆಚ್ಚುಕಡಿಮೆ ಇರಲಿಲ್ಲ. ಸೃಷ್ಠಿಯಲ್ಲಿ ದೇವರ ಮೂಲ ಉದ್ದೇಶಗಳಲ್ಲಿ ಒಂದು ಸಮಸ್ತ ಜೀವಿಗಳಲ್ಲಿ ಸಾಮರಸ್ಯ, ಸಹಬಾಳ್ವಿಕೆ ಮತ್ತು ಪರಸ್ಪರ ಒಬ್ಬರನ್ನೊಬ್ಬರ ಮೇಲೆ ಅವಲಂಬಿಸಿರಬೇಕು ಎಂಬುದು ಮಾನವ ಕುಲಕ್ಕಾಗಿ ಸೃಷ್ಠಿಸಲ್ಪಟ್ಟ ಸುಂದರವಾದ ಜಗತ್ತು ಹೊಂದಾಣಿಕೆ, ಐಕ್ಯತೆ ಮತ್ತು ಪ್ರೀತಿಯಿಂದಲೇ ಕೂಡಿರಬೇಕು ಎಂಬುದು ದೇವರ ಸೃಷ್ಠಿಯ ಮೂಲ ಉದ್ದೇಶವಾಗಿತ್ತು.

**ಆದಿಕಾಂಡ 1:26, 27 ಓದಿರಿ. ಆದಿಕಾಂಡ 1 ಮತ್ತು 2ನೇಯ ಅಧ್ಯಾಯಗಳಲ್ಲಿಯ ಸೃಷ್ಟಿ ವಿವರ ಇತರ ಸೃಷ್ಟಿಗಿಂತ ಮಾನವನು ಹೇಗೆ ಅನ್ಯೋನ್ಯವಾಗಿದ್ದನೆ ಎಂದು ಈ ತಿಳಿಸುತ್ತವೆ?**

———————————————————————————

ದೇವರು ಮಾನವನನ್ನು ತನ್ನ ಸ್ವರೂಪದಲ್ಲಿ ಸೃಷ್ಟಿಸಿದನೆಂದು ಹೇಳುತ್ತದೆ. ಬೇರಾವ ಸೃಷ್ಟಿಯ ಬಗ್ಗೆ ಹೇಳಲಾಗಿಲ್ಲ. " ಆ ಮೇಲೆ ದೇವರು–ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯನನ್ನು ಉಂಟು ಮಾಡೋಣ,... ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟು ಮಾಡಿದನು; ದೇವ ಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು; ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು (ಆದಿ 1:26,27). ಪಂಡಿತರು ಶತಮಾನಗಳುದ್ದಕ್ಕೂ ದೇವರ ನಿಜ ಸ್ವರೂಪದ ಬಗ್ಗೆ ಮತ್ತು ದೇವರ ಸ್ವಭಾವವಾದರೂ ಎಂಥದು ಎಂದು ಚರ್ಚಿಸಿದ್ದಾರೆ; ಆದರೆ ಅನೇಕ ವಾಕ್ಯಗಳು ತಿಳಿಸುವದೇನೆಂದರೆ ದೇವರು ಪ್ರೀತಿಮಯನು.

**1 ಯೋಹಾನ 4:7,8,16 ಓದಿರಿ:ನಾವು ಪ್ರಾರಂಭದಲ್ಲೇ ಹೇಗೆ ಸೃಷ್ಟಿಸಲ್ಪಟ್ಟಿದ್ದೆವು ಅದು ಹೇಗೆ ಸೃಷ್ಟಿಯಲ್ಲಿಯ ಮೂಲ ಐಕ್ಯತೆಯ ಮೇಲೆ ಪರಿಣಾಮ ಭೀರಿತು ಎಂಬುದನ್ನು ಮೇಲಿನ ವಾಕ್ಯಗಳು ಹೇಗೆ ತಿಳಿಸುತ್ತವೆ?**

____________________________________________

____________________________________________

____________________________________________

ದೇವರ ಪ್ರೀತಿ ಮತ್ತು ಇತರ ಸೃಷ್ಠಿಗಿಂತ ಮಾನವರು ಪ್ರೀತಿಸಶಕ್ತರು; ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟರು. ಪ್ರೀತಿಸುವ ಸಾಮರ್ಥ್ಯದವರಾಗಿದ್ದಾರೆ. ಹೀಗಿದ್ದರೂ ಇತರರೊಡನೆಯ ಸಂಬಂಧದಲ್ಲಿ ಮಾತ್ರ ಪ್ರೀತಿ ರೂಢಿಯಲ್ಲಿರಲು ಸಾಧ್ಯ. ಆದದ್ದ–ರಿಂದ ದೇವರ ಸ್ವರೂಪದವರೆಂದು ಹೇಳಲ್ಪಡುವ ಎಲ್ಲರಲ್ಲಿಯೂ ಪ್ರೀತಿಸುವ ಸಾಮರ್ಥ್ಯವಿದ್ದು ಅದು ಆಳವಾದ ಪ್ರೀತಿಯಾಗಿರಬೇಕು.

**ಬೀಳೋಣದ ಪ್ರತಿಫಲಗಳು.**

ಮಾನವರು ಪಾಪದಲ್ಲಿ ಬಿದ್ದದ್ದು ಭೂಮಿಯ ಮೇಲೆ ಬಹಳ ದುಷ್ಪರಿಣಾಮಗಳನ್ನುಂಟು ಮಾಡಿತು. ಆದಾಮ ಹವ್ವಳ ಅವಿಧೇಯತೆ ಭೂಮಿಯ ಮೇಲಿನ ಎಲ್ಲ ಜೀವರಾಶಿಗಳ ನಡುವಿನ ಪರಸ್ಪರ ಅವಲಂಬನೆಯ ಹೊಂದಾಣಿಕೆಯನ್ನು ತೊಡೆದು ಹಾಕಿತು. ಇದಕ್ಕಿಂತಲೂ ಗಂಭೀರವಾಗಿ ಅನ್ಯೆಕ್ಯತೆ, ಭಿನ್ನತೆ ಮತ್ತು ವಿಭಜನೆಗಳನ್ನು ಉಂಟು ಮಾಡಿತು; ಇವು ಇಂದೂ ತಾಂಡವಾಡುತ್ತಿವೆ. ಅನಂತರ ಆದಾಮ ಹವ್ವಳ ನಡುವಿನ ತಕ್ಷಣದ ಪ್ರತಿಕ್ರಿಯೆ, ಪಾಪದಲ್ಲಿ ಬೀಳೋಣಕ್ಕಾಗಿ ಒಬ್ಬರನ್ನೊಬ್ಬರು ದೂಷಿಸಿದರು(ಆದಿ 3:12,13). ಈಗಲೂ ಪರಿಸ್ಥಿತಿ ಇನ್ನೂ ಹದಗೆಟ್ಟಿದೆ.

**ಆದಿ 3:16–19 ಮತ್ತು ಆದಿ 4:1–15 ಓದಿರಿ: ಈ ವಾಕ್ಯಗಳಲ್ಲಿ ಕಂಡುಬರುವ ಪಾಪದಿಂದಾದ ಪ್ರತಿಫಲ ಮತ್ತು ಅದು ದೇವರ ಸೃಷ್ಟಿ ಹೊಂದಾಣಿಕೆ ಮೇಲೆ ಮಾಡಿದ ಪರಿಣಾಮ ಗುರುತಿಸಿರಿ?**

______________________________________________

______________________________________________

______________________________________________

ಆದಾಮನ ಅವಿಧೇಯತೆ ಅನಂತರ ನಡೆದ ಅನೇಕ ಘಟನೆಗಳಿಗೂ ಮತ್ತು ದುಷ್ಪರಿಣಾಗಳಿಗೂ ಮೂಲ ಕಾರಣವಾಯಿತು. ನೈಜ ಪ್ರಕೃತಿ ಪಾಪದಿಂದಾಗಿ ಶಾಪಕ್ಕಿಡಾಗಿದೆ. ಮಾನವ ಸಂಬಂಧಗಳಿಗೆ ದಕ್ಕೆಯುಂಟು ಮಾಡಿದೆ. ಕಾಯಿನ ಮತ್ತು ಹೇಬೆಲರು ಸಹೋದರರು ಒಬ್ಬರನ್ನೊಬ್ಬರು ಪ್ರೀತಿಸಿ ಕಾಳಜಿಯಿಂದಿರಬೇಕಾದವರು, ವೈರಿಗಳಾದರು, ಯಾಕೆಂದರೆ ಒಬ್ಬನು ದೇವರು ತನ್ನನ್ನು ಆರಾಧಿಸುವ ವಿಧಾನವನ್ನು ಅವರಿಗೆ ತಿಳಿಸಿದ್ದರೂ, ದೇವರಂತೆ ನಡೆದುಕೊಳ್ಳದೆ ತನ್ನ ಇಚ್ಛೆಯಂತೆ ಮಾಡಿ ಸ್ವಾರ್ಥತೆಯನ್ನು ಮೆರೆದನು. ಈ ಪ್ರೀತಿಭಂಗದ ಫಲ ಹಿಂಸೆ ಹಾಗೂ ಕೊಲೆ ಇಲ್ಲೆ ಕಾಯಿನನು ಹೇಬೆಲನಿಗೆ ವಿರುದ್ಧ ಮಾಡಿದ್ದಕ್ಕಿಂತಲೂ ದೇವರಿಗೆ ವಿರುದ್ಧವಾಗಿ ನಡೆದದ್ದು ಹೆಚ್ಚು. ದೇವರ ಮೇಲೆ ಅವನು ಕೋಪಗೊಂಡನು (ಆದಿ4:5). ಈ ಕೋಪ ಹೇಬಲನನ್ನು ದ್ವೇಷಿಸುವಂತೆ ಮಾಡಿತು. ಇನ್ನು ಹೆಚ್ಚಾಗಿ ಅವಿಧೇಯತೆ ಮಾನವ ಸಂಬಂಧಗಳನ್ನೂ ಒಡೆದು ಬಿಟ್ಟಿತು.

“ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವದನ್ನು ಅವರು ಹೃದಯದಲ್ಲಿ

ಯೋಚಿಸುವದೇಲ್ಲವು ಯಾವಾಗಲೂ ಬರೀ ಕೆಟ್ಟದ್ದಾಗಿರುವದನ್ನು ಯೆಹೋವನು ನೋಡಿದನು" ಆದಿ 6:5. ಈ ಕೆಟ್ಟತನ ದೇವರ ಮೂಲ ಸೃಷ್ಟಿಯನ್ನು ನಾಶಮಾಡಿದ ಪ್ರಳಯಕ್ಕೆ ಕಾರಣವಾಯಿತು. ಹೇಗಿದ್ದರೂ ದೇವರು ಮಾನವ ಕುಲವನ್ನು ನಾಶಮಾಡಿದ ವಂಶ ಮುಂದುವರೆಯುವುದಕ್ಕಾಗಿ ನೋಹ ಮತ್ತವನ ಕುಟುಂಬವನ್ನು ಉಳಿಸಿದನು.

ಪ್ರಳಯದ ನಂತರ ದೇವರು ನೋಹ ಮತ್ತವನ ಕುಟುಂಬಕ್ಕೂ ಆಶ್ವಾಸನೆ ಮಾಡಿ ಮುಂದೆ ಅವರು ನಾಶವಾಗದೇ ಉಳಿಯುವರು ಅದಕ್ಕೆ ಸಾಕ್ಷಿ ಮುಗಿಲು ಬಿಲ್ಲು ಎಂದು ಆತನ ದಯೆ ಮತ್ತು ಕರುಣೆ ತೋರಿಸಿದನು (ಆದಿ 9:12–17; ಯಶಾಯ 54:7–10). ಮುಂದೆ ತನಗೆ ತನ್ನ ವಾಕ್ಯಕ್ಕೆ ಪ್ರಾಮಾಣಿಕವಾಗಿ ಉಳಿಯುವ ಮಾನವ ಕುಟುಂಬ ಇರುತ್ತದೆ ಎಂದು ದೇವರು ಪುನಃ ತಿಳಿಸಿದನು.

**ಪಾಪವು ಹೇಗೆ ಮಾನವ ಬದುಕಿನಲ್ಲಿ ಒಡಕನ್ನುಂಟು ಮಾಡುತ್ತದೆ? ಅದನ್ನು ತಡೆಗಟ್ಟಲು ತಾವು ಯಾವ ಪ್ರಯತ್ನಗಳನ್ನು ಮಾಡಬಹುದು?**

____________________________________________

____________________________________________

____________________________________________

**ಮಂಗಳವಾರ** **ಅಕ್ಟೋಬರ್ 2**

**ಮುಂದುವರೆದ ಅನೈಕ್ಯತೆ ಮತ್ತು ಬೇರ್ಪಡುವಿಕೆ**
**ಆದಿಕಾಂಡ 11:1–9 ಓದಿರಿ: ಇಲ್ಲಿ ಐಕ್ಯತೆಗೆ ಮತ್ತು ಹೊಂದಿಕೆಗೆ ಧಕ್ಕೆ ತಂದು ಪರಿಸ್ಥಿತಿ ವಿಷಮಗೊಳ್ಳಿಸಿದ್ದು ಯಾವುದು?**

____________________________________________

____________________________________________

____________________________________________

ಸತ್ಯವೇದದ ವಿವರವಂತೆ ಪ್ರಳಯದ ನಂತರ ಆದ ಘಟನೆ ಬಾಬೆಲ್ ಗೋಪುರದ ನಿರ್ಮಾಣ, ಭಾಷೆಗಳಗೊಂದಲ, ಮತ್ತು ಜನರು ಚದುರಿಸಲ್ಪಟ್ಟದ್ದು. ಅಲ್ಲಿಯವರೆಗೆ ಅವರೆಲ್ಲರೂ ಒಂದೇ ಭಾಷೆಯನ್ನಾಡುತ್ತಿದ್ದರು. ಯೂಫ್ರೇಟೀಸ್ ಮತ್ತು ಟೈಗ್ರಿಸ್ ನದಿಗಳ ನಡುವಿನ ನಾಡು ಸುಂದರ ಮತ್ತು ಫಲವತ್ತು. ಈಶಿನಾರ್(ದಕ್ಷಿಣ ಈರಾಕ್) ಪ್ರಾಂತ್ಯದಲ್ಲಿ ನೋಹನ ಪೀಳಿಗೆ ಅವರಿಗಾಗಿ ಪಟ್ಟಣವನ್ನು ನಿರ್ಮಿಸಿ

ಅಲ್ಲೊಂದು ಎತ್ತರವಾದ ಗೋಪುರ ಸ್ಥಾಪಿಸಿದರು(ಆದಿ 11:2). ಇಂದಿನ ಪುರಾವೆಗಳು, ಆ ಮೆಸೊಪೊಟೆಮಿಯಾ ಮೊದಲಿನಿಂದಲೂ ಶ್ರೀಮಂತ ನಾಗರಿಕತೆ ಹೊಂದಿದ್ದು ಅಧಿಕ ಜನಸಂಖ್ಯೆ ಇಲ್ಲಿತ್ತು. ಇಲ್ಲಿ ನೆಲಸಿದ್ದ ಜನಾಂಗಗಳಲ್ಲಿ ಸುಮಾರ್ಯರು ಇದ್ದರು. ಇವರೇ ಮಣ್ಣಿನ ಸಣ್ಣ ಹಲಗೆಗಳ ಮೇಲೆ ಬರೆಯುವುದನ್ನು ಪ್ರಾರಂಭಿಸಿದವರು. ಇವರು ರಚನಾತ್ಮಕ ನಿವಾಸಿಗಳನ್ನು ನಿರ್ಮಿಸಿ ಅವುಗಳಲ್ಲಿ ವಾಸಿಸಿದರು. ಅನೇಕ ಆಭರಣಗಳನ್ನು ಆಯುಧಗಳನ್ನು ಮನೆ ಸಾಮಾನುಗಳನ್ನು ಕಂಡು ಹಿಡಿದವರು. ಇವರು ದೇವತೆಗಳನ್ನು ಆರಾಧಿಸಲು ಸಣ್ಣ ಸಣ್ಣ ಗೋಪುರಕಾರದ ಗುಡಿಗಳನ್ನು ಕಟ್ಟಿದ್ದರು.

ನೋಹನ ಯಾವ ಪೀಳಿಗೆ ಶಿನಾರ್ ಪ್ರಾಂತ್ಯದಲ್ಲಿ ನೆಲೆಯಾದರೋ ಅವರು ನೋಹನ ದೇವರನ್ನು ಆತನು ಮಾಡಿದ ವಾಗ್ದಾನ ಇನ್ನು ಜಗತನ್ನ ಪ್ರಳಯದಿಂದ ಹಾಳು ಮಾಡುವುದಿಲ್ಲ ಎಂಬುದನ್ನು ಮರೆತುಬಿಟ್ಟರು. ಬಾಬೆಲ್ ಗೋಪುರದ ನಿರ್ಮಾಣ ಅವರ ಶ್ರೇಷ್ಠ ಜ್ಞಾನ ಮತ್ತು ಕೌಶಲ್ಯಗಳಿಗೆ ಪ್ರತ್ಯೇಕವಾಗಿತ್ತು. ತಮ್ಮ ಹೆಸರಿಗೆ ಖ್ಯಾತಿ ತರಬೇಕೆಂಬುದನ್ನು ಆ ಮೂಲಕ ಅವರು ಸಾಧಿಸಿದರು (ಆದಿ 11:4) "ದೈವೋದ್ದೇಶ ಏನಾಗಿತ್ತೆಂದರೆ, ಸತ್ಯ ಧರ್ಮ ಪಾಲನೆಯಿಂದ ಮಾನವರು ಐಕ್ಯತೆಯನ್ನು ಉಳಿಸಿಕೊಳ್ಳಬೇಕಿತ್ತು. ಮೂರ್ತಿ ಪೂಜೆ, ಬಹು ದೈವತ್ವ ಇವರಲ್ಲಿಯ ಆಧ್ಯಾತ್ಮದ ಬಂಧವನ್ನು ಮುರಿದು ಬಿಟ್ಟವು, ಇದರಿಂದಾಗಿ ಅವರು ಧಾರ್ಮಿಕ ಐಕ್ಯತೆಯನ್ನು ಕಳೆದುಕೊಳ್ಳುವುದಲ್ಲದೇ ಸಹೋದರ ಭಾವಬಂದವನ್ನು ಹಾಳು ಮಾಡಿಕೊಂಡರು. ತಾವು ಉಳಿಯಲು ನೋಟ ಭವ್ಯವಾಗಿ ಕಾಣುವ ಗೋಪುರವನ್ನು ಕಟ್ಟುವದರಲ್ಲಿ ಆಂತರ್ಯದ ಐಕ್ಯತೆಯನ್ನು ಅವರು ಕಳೆದುಕೊಂಡರಲ್ಲದೇ ಗೋಪುರ ಕಟ್ಟಿ ಉಳಿಯುವದರಲ್ಲಿಯೂ ಸೋತು ಹೋದರು". ಎಸ್.ಡಿ.ಎ. ಬೈಬಲ್ ಕಾಮೆಂಟ್ರಿ ಪುಟ 284,285.

ಆದಾಮ ಹವ್ವಳು ಪಾಪದಲ್ಲಿ ಬಿದ್ದದ್ದು ಮಾನವ ಕುಲದ ಐಕ್ಯಮತ್ಯ ಮತ್ತು ದೇವರ ಮೂಲ ಉದ್ದೇಶವನ್ನು ನುಚ್ಚು ನೂರು ಮಾಡಿತ್ತು. ದೇವರ ಆರಾಧನೆಯ ವಿಷಯದಲ್ಲಿ ಗೊಂದಲ ಉಂಟುಮಾಡಿತು; ಭೂಮಿಯ ಮೇಲೆಲ್ಲಾ ಕೆಟ್ಟತನ ಮತ್ತು ವಿಭಿನ್ನ ಸಂಸ್ಕಾರ, ಭಾಷೆ, ಜನಾಂಗಗಳನ್ನಾಗಿ ವಿಭಾಗಿಸಿದಲ್ಲದೇ ಒಂದನ್ನೊಂದು ಸಹಿಸಿಕೊಳ್ಳದಹಾಗೆ ಮಾಡಿದೆ.

**ಭಾಷೆ, ಜನಾಂಗ, ಸಂಸ್ಕಾರಗಳೆಂದು ಭಾಗಗಳಾಗಿ ಒಬ್ಬೊಬ್ಬರಿಗೂ ನೋವನ್ನುಂಟು ಮಾಡುವ ವಿಭಜನೆಯನ್ನು ಸರಿಪಡಿಸಲು ಯಾವ ಕ್ರಿಯಾತ್ಮಕ ಉಪಶಮನಗಳನ್ನು ಸೂಚಿಸುವಿರಿ?**

**ದೇವರ ಜನರ ಪಿತ ಅಬ್ರಹಾಮ.**

ಜಗತ್ತಿನ ಏಕಧೈವತ್ವ ಧೋರಣೆ ನಂಬಿದ ಶ್ರೇಷ್ಠ ಮೂರು ಧರ್ಮಗಳು ಯೆಹೂದಿ, ಕ್ರೈಸ್ತ ಮತ್ತು ಇಸ್ಲಾಮ್, ಅಬ್ರಹಾಮನನ್ನು ತಮ್ಮ ಪಿತನೆಂದು ನಂಬುತ್ತವೆ. ಕ್ರೈಸ್ತರಿಗೆ ಈ ಒಂದು ಸಂಬಂಧ ಅಧ್ಯಾತ್ಮಿಕವಾದದ್ದು. ಮೆಸಪೊಟೊಮಿಯದಲ್ಲಿಯ ತನ್ನ ದೇಶವನ್ನು ಬಿಟ್ಟು ಹೊರಬರಬೇಕೆಂದು ಅಬ್ರಹಾಮನಿಗೆ ಹೇಳಿದಾಗ, " ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದ ಉಂಟಾಗುವುದು". ಎಂದು ಪ್ರವಾದಿಸಲ್ಪಟ್ಟಿತು(ಆದಿ 12:13, 18:18, 22:18). ಈ ಆಶೀರ್ವಾದಗಳು ಯೇಸುವಿನ ಮೂಲಕ ಬಂದವು.

**ಇಬ್ರೆಯರಿಗೆ 11:8–19, ರೋಮಾಪುರದವರಿಗೆ 4:1–3, ಮತ್ತು ಗಲಾತ್ಯದವರಿಗೆ 3:29 ಓದಿರಿ: ಅಬ್ರಹಾಮನ ನಂಬಿಕೆಯ ಯಾವ ಅಂಶವನ್ನು ಈ ವಾಕ್ಯಗಳು ತಿಳಿಸುತ್ತವೆ, ಮತ್ತು ಅದು ಕ್ರೈಸ್ತರ ಐಕ್ಯತೆಗೆ ಅತ್ಯಗತ್ಯವಾದದ್ದು ಯಾವುದು ಎಂದು ಅರ್ಥಮಾಡಿಕೊಳ್ಳಲು ಈ ವಾಕ್ಯಗಳು ತಿಳಿಸುವದೇನು?**

____________________________________________

____________________________________________

____________________________________________

ಎಲ್ಲಾ ವಿಶ್ವಾಸಿಗಳ ಪಿತನಾಗಿ, ಅಬ್ರಹಾಮನು ಇಡೀ ಕ್ರೈಸ್ತ ಒಗ್ಗಟ್ಟಾಗಿ ಮೂಲವಾಗಿರುವ ಅಂಶಗಳನ್ನು ನಮಗೆ ಕೊಟ್ಟಿದ್ದಾನೆ. ಮೊದಲನೆಯದು, ಆತನು ವಿಧೇಯತೆಯನ್ನು ರೂಢಿಮಾಡಿದನು. "ನಂಬಿಕೆಯಿಂದಲೇ ಅಬ್ರಹಾಮನು ಕರೆಯಲ್ಪಟ್ಟ ಕೂಡಲೇ ಕರೆದಾತನ ಮಾತನ್ನು ಕೇಳಿ ತಾನು ಬಾಧ್ಯವಾಗಿ ಹೊಂದಬೇಕಾಗಿದ್ದ ಸ್ಥಳಕ್ಕೆ ಹೊರಟು ಹೋದನು; ತಾನು ಹೋಗಬೇಕಾದ ಸ್ಥಳವು ಯಾವದೆಂದು ತಿಳಿಯದೆ ಹೊರಟನು" (ಇಬ್ರೆಯರಿಗೆ 11:8). ಎರಡನೆಯದು, ದೇವರ ವಾಗ್ದಾನಗಳಲ್ಲಿ ಅವನು ಭರವಸೆ ಇಟ್ಟನು. "ನಂಬಿಕೆಯಿಂದಲೇ ಅವನು ವಾಗ್ಧಾನತ್ತ ದೇಶಕ್ಕೆ ಬಂದಾಗ ಅಲ್ಲಿ ಅನ್ಯದೇಶದಲ್ಲಿ ಇದ್ದವನಂತೆ ಡೇರೆಗಳಲ್ಲಿ ಇದ್ದುಕೊಂಡು ಪ್ರವಾಸಿಯಾಗಿ ಬದುಕಿದನು. ಅದೇ ವಾಗ್ದಾನಕ್ಕೆ ಸಹಬಾಧ್ಯರಾಗಿದ್ದ ಇಸಾಕನೂ ಯಾಕೋಬನು ಅವನಂತೆಯೇ ಡೇರೆಗಳಲ್ಲಿ ವಾಸಿಸಿದರು, ಯಾಕೆಂದರೆ ಅವನು ಶಾಶ್ವತವಾದ ಆಸ್ತಿವಾರಗಳುಳ್ಳ ಪಟ್ಟಣವನ್ನು ಅಂದರೆ ದೇವರು ಸಂಕಲ್ಪಿಸಿ ನಿರ್ಮಿಸಿದ ಪಟ್ಟಣವನ್ನು ಎದುರುನೋಡುತ್ತಿದ್ದನು" (ಇಬ್ರಿ 11:9,10). ಮೂರನೆಯದು, ದೇವರು

ತನಗೆ ಗಂಡು ಮಗುವನ್ನು ಕೊಡುತ್ತಾನೆ ಮತ್ತು ತನ್ನ ಸಂತಾನ ಅಸಂಖ್ಯಾತವಾಗಿ ಆಕಾಶದ ನಕ್ಷತ್ರಗಳಷ್ಟಾಗುವುದು ಎಂದು ನಂಬಿದನು. ಆತನ ಪ್ರತಿಕ್ರಿಯೆ ದೆಸೆಯಿಂದ ದೇವರು ಅವನನ್ನು ಅವನ ನಂಬಿಕೆಯಿಂದಾಗಿ ನೀತಿವಂತನೆನಿಸಿದನು ರೋಮ 4:1–3). ನಾಲ್ಕನೆಯದು, ದೇವರ ರಕ್ಷಣೆಯ ಯೋಜನೆಯಲ್ಲಿ ಅತನು ಭರವಸೆ ಇಟ್ಟನು. ಅಬ್ರಹಾಮನ ನಂಬಿಕೆಗೆ ಅಗ್ನಿ ಪರೀಕ್ಷೆ ಬಂದಿದ್ದು ಅಬ್ರಹಾಮನು ತನ್ನ ಮಗನನ್ನು ದೇವರಿಗೆ ಯಜ್ಞವಾಗಿ ಮೊರೀಯ ಬೆಟ್ಟದ ಮೇಲೆ ಅರ್ಪಿಸಬೇಕೆಂದಾಗ (ಆದಿ 22:1–19; ಇಬ್ರಿಯ 11:17–19).

ಹಳೆಯ ಒಡಂಬಡಿಕೆ ಅಬ್ರಹಾಮನನ್ನು ದೇವರ ಸ್ನೇಹಿತನೆಂದು ಬಣ್ಣಿಸುತ್ತದೆ(2 ಪೂರ್ವಕಾಲ 20:7; ಯೆಶಾಯ 41:8). ಆತನ ನಂಬಿಗಸ್ತ ಬದುಕು, ನಿಶ್ಚಲವಾದ ವಿಧೇಯತೆ ದೇವರ ವಾಗ್ದಾನಗಳಲ್ಲಿಯ ಅವನ ನಂಬಿಕೆ, ಇವು ಇಂದಿನ ಕ್ರೈಸ್ತರಲ್ಲಿರಬೇಕಾದ ಗುಣಗಳಿಗೆ ಶ್ರೇಷ್ಠ ಮಾದರಿಯಾಗಿದ್ದಾನೆ.

**ಮುಂದಿನ ಕೆಲ ದಿನ ನಿಮ್ಮ ನಡೆ ನುಡಿಯ ಬಗ್ಗೆ ಚಿಂತನೆ ಮಾಡಿರಿ ಯಾವ ಶ್ರಮದಿಂದಾಗಿ ನೀವು ಇನ್ನು ಮುಂದೆ ಮಾಡುವುದಿಲ್ಲ, ನಡೆಯುವುದರಲ್ಲಿ ನುಡಿಯುವುದರಲ್ಲಿ ನಿಜ ಕ್ರೈಸ್ತ ವಿಶ್ವಾಸವನ್ನು ಪ್ರತಿಬಿಂಬಿಸಬಹುದು?**

**ಗುರುವಾರ** **ಅಕ್ಟೋಬರ್** 4

**ದೇವರ ಆಯ್ದ ಜನಾಂಗ**

ದೇವರು ಅಬ್ರಹಾಮನನ್ನು ತನ್ನ ಸೇವಕನನ್ನಾಗಿ ಕರೆಯುವದರಲ್ಲಿ, ತನ್ನನ್ನು ಪ್ರತಿನಿಧಿಸುವ ಜನಾಂಗವೊಂದನ್ನು ತನಗಾಗಿ ಆರಿಸಿಕೊಂಡನು. ಈ ಆಯ್ಕೆ ಮತ್ತು ಕರೆಯುವಿಕೆ ದೇವರ ಪ್ರೀತಿ ಮತ್ತು ಕೃಪೆಯಿಂದಲೇ ಮಾನವನು ಪಾಪದಲ್ಲಿ  ಬಿದ್ದದರಿಂದಾದ ಅನಾಹುತ ಒಡಕುಗಳಿಂದ ಅವರನ್ನು ಉದ್ಧರಿಸಲು ದೇವರ ಪರಿಹಾರವು ಈ ಆಯ್ಕೆಯ ಕೇಂದ್ರವಸ್ತುವಾಗಿತ್ತು. ದೇವ ಜನಾಂಗದ ಇತಿ–ಹಾಸ. ಈ ವಿಮೋಚನೆಯನ್ನು ದೇವರು ಹೇಗೆ ಕೈಗೊಂಡನೆಂಬುದನ್ನು ತಿಳಿಸುತ್ತದೆ ಮತ್ತು ದೇವರ ರಕ್ಷಣೆ ಯೋಜನೆಯ ಕತೆಯ ಬಹುಭಾಗ ಒಡಂಬಡಿಕೆಯ ರಾಷ್ಟ್ರ ಇಸ್ರಾಯೇಲಿನ ಬಗೆಯೇ ಆಗಿದೆ.

**ಧರ್ಮೋಪದೇಶಕಾಂಡ 7:6–11ರ ಪ್ರಕಾರ ಇಸ್ರಾಯೇಲ್ಯರನ್ನು ದೇವರು ತನ್ನ ಜನಾಂಗವೆಂದು ಏಕೆ ಕರೆದನು? ಅಬ್ರಹಾಮನ ಸಂತತಿಯವರನ್ನು ತನ್ನ ಜನಾಂಗವೆಂದು ಏಕೆ ಕರೆದನು?**

ದೇವರು ಇಸ್ರಾಯೇಲ್ಯರನ್ನು ತನ್ನವರನ್ನಾಗಿ ಆರಿಸಿಕೊಂಡದ್ದು ದೇವರು ಇಡೀ ಮಾನವ ಕುಲವನ್ನು ಪ್ರೀತಿಸುತ್ತಾನೆ ಎಂಬುದನ್ನು ತೋರಿಸುತ್ತದೆ. ದೇವರು ಅಬ್ರಹಾಮನೊಡನೆ ಮತ್ತು ಆತನ ಸಂತಾನದವರೊಡನೆ ಒಡಂಬಡಿಕೆ ಮಾಡಿಕೊಂಡನು ಹೀಗೆ ಅವರು ದೇವರ ತಿಳುವಳಿಕೆಯಲ್ಲಿ ಸದಾ ಉಳಿಯುವದಲ್ಲದೇ ಮಾನವನ ವಿಮೋಚನೆಯಾಗಬೇಕೆಂದು ದೇವರು. ಅದನ್ನು ಮಾಡಿದನು (ಕೀರ್ತನೆ 67:2). ಹೀಗಿದ್ದರೂ ದೇವರು ಇಸ್ರಾಯೇಲ್ಯರನ್ನು ಆಯ್ದುಕೊಂಡದ್ದು ಆತನ ಅಪರಿಮಿತ ಪ್ರೀತಿ ಕಾರ್ಯವಾಗಿದೆ. "ನಿಮ್ಮನ್ನು ಎಲ್ಲಾ ಜನಾಂಗಗಳಲ್ಲಿ ಹೆಚ್ಚು ಮಂದಿ ಎಂದು ಇಷ್ಟಪಟ್ಟು ಆದುಕೊಳ್ಳಲಿಲ್ಲ; ನೀವು ಎಲ್ಲಾ ಜನಾಂಗಗಳಿಗಿಂತಲೂ ಸ್ವಲ್ಪ ಮಂದಿಯಷ್ಟೆ"(ಧರ್ಮೋ 7:7).

ದೇವರು ಮಾನವರನ್ನು ಆರಿಸಿಕೊಳ್ಳುವಾಗ ಮಾನವರ ಮೌಲ್ಯಗಳಿದ್ದಂತೆ ಆತನ ಮೌಲ್ಯಗಳು ವ್ಯತ್ಯಾಸವಾಗಿವೆ. ಮಾನವರು ತಮ್ಮ ನಾಯಕರನ್ನು ಆರಿಸುವಾಗ ಗಮನಿಸುವುದು, ಜ್ಞಾನ, ಬಲ, ಆತ್ಮವಿಶ್ವಾಸ. ದೇವರು ಬಲಹೀನರನ್ನು, ತಮ್ಮ ಸಾಮರ್ಥ್ಯ ತಿಳಿದು ಬಲಹೀನತೆಯ ಅರಿವಿದ್ದು, ತಾವು ಶೂನ್ಯರೆಂದು ಮನಗಂಡು ದೇವರನ್ನು ಮಹಿಮೆಪಡಿಸುವವರನ್ನು ಮಾನ್ಯರೆನಿಸುತ್ತಾನೆ (1ಕೋರಿ 1:26–31).

ಆದರೂ ಅಂಧವರು ಅನುಭವಿಸುವ ಆಶೀರ್ವಾದಗಳನ್ನು ಗಮನಿಸಿರಿ: "ದೇವರು ತನ್ನ ಇಸ್ರಾಯೆಲ್ಯರನ್ನು ಮಹಿಮೆಯ ಮತ್ತು ಜನ ಹರಿಸುವ ಜನಾಂಗವಾಗಿರ ಬಯಸಿದನು. ಎಲ್ಲ ಅಧ್ಯಾತ್ಮಿಕ ಅವಕಾಶಗಳು ಅವರಿಗಿದ್ದವು. ತನ್ನನ್ನು ಪ್ರತಿನಿಧಿಸುವ ಸುಗುಣರು ಅವರಾಗಿರಲೆಂದು ಹಾಗೆ ಅವರು ಬೆಳೆಯಲು ಬೇಕಾದ ಯಾವುದನ್ನು ಹಿಂದೆ ಹಿಡಿಯಲಿಲ್ಲ".

"ಅವರು ದೇವರ ಆಜ್ಞೆಗಳಿಗೆ ವಿಧೇಯರಾಗಿ ಸಮೃದ್ಧಿಹೊಂದಿರುವದು ಇತರ ರಾಷ್ಟ್ರಗಳು ನೋಡಿ ವಿಸ್ಮಯಗೊಳ್ಳುವಂತಾಗಬೇಕು. ಅವರನ್ನು ಜ್ಞಾನಿಗಳನ್ನಾಗಿಯೂ, ನಿಪುಣರನ್ನಾಗಿಯೂ ಮಾಡಿ ಎಲ್ಲ ಕೆಲಸಗಳಲ್ಲಿ ಅವರಿಗೆ ಶ್ರೇಷ್ಠತೆಯನ್ನು ನೀಡಿದವನು ಅವರನ್ನು ತನ್ನ ಆಜ್ಞೆಗಳಿಗೆ ವಿಧೇಯರನ್ನಾಗಿ ಮಾಡಿ ಉನ್ನತ ಜನಾಂಗವನ್ನಾಗಿ ಮೇಲೆತ್ತುವನು. ವಿಧೇಯರಾಗಿಯು ಉಳಿದರೆ ಇತರರಿಗೆ ಸೋಂಕುವ ರೋಗಗಳಿಂದ ತಪ್ಪಿಸಲ್ಪಟ್ಟವರಾಗಿ ತಿಳುವಳಿಕೆಯಲ್ಲಿ ಉನ್ನತರಾಗಿ ಉಳಿಯುವರು. ಅವರ ಅಭಿವೃದ್ಧಿ ಮತ್ತು ಶ್ರೀಮಂತಿಕೆಯ ಮೂಲಕ ದೇವರ ಮಹಿಮೆ ಶಕ್ತಿ ಹಾಗೂ ಘನತೆ ತೋರ್ಪಡಬೇಕಾಗಿತ್ತು. ಅವರು ಯಾಜಕ ಮತ್ತು ರಾಜಕುಮಾರರ ರಾಜ್ಯವಾಗಿರಬೇಕಾಗಿತ್ತು. ದೇವರು ಅವರಿಗೆ ಬೇಕಾದ ಎಲ್ಲವುಗಳನ್ನು ಒದಗಿಸಿ ಭೂಮಿಯ ಮೇಲೆ ಅವರು ಉನ್ನತರಾಷ್ಟ್ರವಾಗುವಂತೆ ಅವಕಾಶ ಮಾಡಿದನು, ಈ.ಜಿ. ವೈಟ್ ಪು.288.

**ದೇವರು ಆ ದಿನ ಇಸ್ರಾಯೇಲ್ಯರಿಗೆ ಮಾಡಿದ್ದು ಏನು? ಅವರನ್ನು ಕರೆದದ್ದು ಮತ್ತು ಇಂದು ಅಡ್ವೆಂಟಿಸ್ಟರನ್ನು ಕರೆದಿದ್ದು ಅವರಿಗೆ ಮಾಡಿರುವದು ಏನು? ಇವೆರಡಕ್ಕೂ ಇರುವ ಸಮಾನತೆಗಳ ಪಟ್ಟಿ ಮಾಡಿ ಸಬ್ಬತ್ತಿನ ತರಗತಿಗೆ ತೆಗೆದು ಕೊಂಡು ಬನ್ನಿರಿ.**

**ಶುಕ್ರವಾರ** **ಅಕ್ಟೋಬರ್ 5**

**ಹೆಚ್ಚಿನ ಅಭ್ಯಾಸ: ಈ.ಜಿ. ವೈಟ್‌ರವರ, "ಕ್ರಿಯೇಶನ್, ಪು.44–51" ಮತ್ತು "ಅಬ್ರಹಾಮನ ಕರೆಯುವಿಕೆ "ಪು.125–131", ಪೆಟ್ರಿಯಾರ್ಕ್ಸ್ ಆಂಡ್ ಪ್ರಾಫೆಟ್ಸ್.**

ದೇವರು ಮಾನವರನ್ನು ಸೃಷ್ಟಿಸಿದ ಮೂಲ ಉದ್ದೇಶವನ್ನು ಆತನು ಸ್ಥಾಪಿಸಿದ ಕುಟುಂಬ ಮತ್ತು ಸಬ್ಬತ್ತು ಸಂಸ್ಥೆಗಳಲ್ಲಿಯೂ ಕಾಣುತ್ತೇವೆ. ಸಬ್ಬತ್ತು ಸರ್ವ ಮಾನವರಿಗಾಗಿ ಸೃಷ್ಟಿಸಲ್ಪಟ್ಟಿತ್ತು ಎಂದು ಯೇಸು ಮಾರ್ಕ 2:27, 28ರಲ್ಲಿ ಹೇಳಿದ್ದಾರೆ. ಆದಿಕಾಂಡ ಪುಸ್ತಕದ ವಿವರಣೆ ಸುವಾರ್ತಿಕವೆಂದು ತಿಳಿಸುತ್ತದೆ, ಯಾವಾಗ ದೇವರು ಏಳನೆಯ ದಿನವನ್ನು ಪ್ರತ್ಯೇಕ ಪಡೆಸಿದನೆಂದರೆ ಇಸ್ರಾಯೇಲ್ಯರನ್ನು ತನ್ನ ಒಡಂಬಡಿಕೆಯ ಜನಾಂಗವಾಗಿ ಕರೆಯುವ ಪೂರ್ವದಲ್ಲಿ, ಅಷ್ಟೇ ಅಲ್ಲ ಪಾಪವು ಪ್ರವೇಶಿಸುವ ಮೊದಲು. ಇಡೀ ಮಾನವ ಜನಾಂಗ ಈ ಸಬ್ಬತ್ತನ್ನು ಕೈಗೊಂಡು ನಡೆದಿದ್ದರೆ ಅದು ಎಲ್ಲರನ್ನು ಒಗ್ಗಟ್ಟಾಗಿ ಇಡುವ ಅದ್ಭುತ ಎಂಥಾ ಶಕ್ತಿಯಾಗಿ ಪರಿಣಮಿಸುತ್ತಿತ್ತು. ಅದು ಒಂದು ವಿಶ್ರಾಂತಿಯ ದಿನವಾಗಿದ್ದು ಆದಾಮನ ಪೀಳಿಗೆಯನ್ನು ತನ್ನೊಡನೆಯೂ ಮತ್ತು ಪರಸ್ಪರ ಒಬ್ಬೊಬ್ಬರೊಡನೆಯೂ ಬೆಸೆದರಿಸುವ ಬಂಧನ ಸ್ಮರಿಸುತ್ತಿರಬೇಕಾಗಿ–ತ್ತು. " ಸಬ್ಬತ್ತನ್ನು ಮತ್ತು ಕುಟುಂಬವನ್ನು ಒಂದೇ ರೀತಿಯ ದೇವರು ಏದೆನ್ ತೋಟದಲ್ಲಿ ಸಂಸ್ಥಾಪಿಸಿದರು, ಮತ್ತು ದೇವರ ಉದ್ದೇಶ ಇವೆರಡೂ ಬೇರ್ಪಡದ ಹಾಗೆ ಸಂಬಂಧದಲ್ಲಿರಬೇಕು. ಬೇರೆ ಎಲ್ಲಾ ದಿನಗಳಿಗಿಂತ ಸಬ್ಬತ್ತಿನಂದು ಏದೆನ್ ಬದುಕನ್ನು ನಾವು ಜೀವಿಸಬಹುದು. ದೇವರ ಉದ್ದೇಶವೇನಾಗಿತ್ತೆಂದರೆ, ಕುಟುಂಬದ ಸದಸ್ಯರು ಕಾಯಕದಲ್ಲಿ ಮತ್ತು ಅಭ್ಯಾಸದಲ್ಲಿ, ಆರಾಧನೆ ಮತ್ತು ಮನರಂಜನೆಯಲ್ಲಿ, ತಂದೆ ಮನೆಯ ಯಾಜಕನಾಗಿ, ಹಾಗೂ ತಂದೆ ತಾಯಿಯರು ಮಕ್ಕಳು ಶಿಕ್ಷಕರಾಗಿ ಮತ್ತು ಸಹಚರರಾಗಿ ಬೆರೆತುಕೊಳ್ಳಬೇಕಾಗಿತ್ತು" ಎಲ್ಲೆನ್ ವೈಟ್, ಚೈಲ್ಡ್ ಗೈಡೆನ್ಸ್, ಪು.535

**ಚರ್ಚೆಯ ಪ್ರಶ್ನೆಗಳು:**

1. ಆದಿಕಾಂಡದಲ್ಲಿ ಆದಾಮನ ಪಕ್ಕೆಯಿಂದ ಹವ್ವಳ ಸೃಷ್ಟಿಯಾದ ಎಂಬ ವರ್ಣನೆಯು ಅವರಿಬ್ಬರ ನಡುವೆ ನಿಕಟವಾದ ಸಂಬಂಧವಿರಬೇಕೆಂದು ಅದು ಹೇಗೆ ತಿಳಿಸುತ್ತದೆ? ಯಾಕೆ ಇದೇ ಸತ್ಯವೇದದಲ್ಲಿ ತೋರಿಬರುವ ಪತಿ ಪತ್ನಿಯರ ನಡುವಿನ ನಿಕಟ ಸಂಬಂಧದಂತೆ ತನ್ನ ಮತ್ತು ತನ್ನ ಜನರ ಸಂಬಂಧ ಇರಬೇಕೆಂದು ದೇವರ ಉದಾಹರಣೆಯಾಗಿ ತಿಳಿಸಿದ್ದಾರೆ ಇದರಿಂದ ನಮಗೇನು ತಿಳಿಯುತ್ತದೆ?

2. ಬಾಬೆಲ್ ಗೋಪುರದ ನಿರ್ಮಾಣದ ಕತೆಯಿಂದ ಮನುಷ್ಯರ ಅನೇಕ ಕುಲ ಜನಾಂಗ ಭಾಷೆಗಳವರಾಗಿರಬಾರದು ಎಂದು ದೇವರು ಉದ್ದೇಶಿಸಿದ್ದರು ಎಂದು ತಿಳಿಯುತ್ತೇವೆ. ಆದರೆ ಇಂದಿನ ಅಂಥ ಸಮಾಜದ ಭೇದಗಳನ್ನು ಹೇಗೆ ಅಥ-ರ್ಮಾಡಿಕೊಳ್ಳುವಿರಿ? ಸಭೆಗಳಲ್ಲಿ ಇಂಥ ಭಾಷೆ ಜನಾಂಗಗಳ ವಿಭಜನೆ ಇದ್ದರೂ ಐಕ್ಯತೆ–ಅನ್ಯೋನ್ಯತೆಯನ್ನು ನೀವು ಹೇಗೆ ಸಾಧಿಸುವಿರಿ?

3. ಹಿಂದಿನ ಇಸ್ರಾಯೇಲ್ಯರನ್ನು ಮತ್ತು ಇಂದಿನ ಅಡ್ವೆಂಟಿಸ್ಟರನ್ನು ದೇವರು ಕರೆದಿರುವನು, ಇವೆರಡು ಕರೆಯುವಿಕೆಯಲ್ಲಿ ಕಂಡುಬರುವ ಶ್ರೇಷ್ಠ ಸಮಾನತೆಗಳನ್ನು ತಿಳಿಸಿರಿ, ಬಹಳ ಪ್ರಾಮುಖ್ಯ ಇಲ್ಲಿ ನಾವು ಕಲಿಯುವ ಮೂಕ್ಯಪಾಠಗಳು ಯಾವುವು? ಅವು ಹೇಗೆ ಕ್ರಿಸ್ತನಲ್ಲಿ ನಾವಿಂದು ದೇವರ ಕರೆಯುವಿಕೆಗೆ ಪ್ರಾಮಾಣಿಕವಾಗಿ ನಡೆದುಕೊಳ್ಳಲು ಸಹಾಯವಾಗುತ್ತವೆ?

ಸಾರಾಂಶ: ಮಾನವ ಕುಲದ ಸೃಷ್ಟಿಯ ಮೂಲ ಉದ್ದೇಶ ಮಾನವರು ಅನ್ಯೋನ್ಯತೆಯಿಂದಲೂ, ಐಕ್ಯತೆಯಿಂದಲೂ ಒಂದೇ ಕುಟುಂಬವಾಗಿ ಬಾಳಬೇಕೆಂದು ದೇವರು ಇಚ್ಛಿಸಿದ್ದನು. ದೇವರ ಈ ಉದ್ದೇಶವನ್ನು ಕೆಡಿಸಿದ್ದು ನಮ್ಮ ಮೂಲ ಪಿತೃಗಳ ಅವಿಧೆಯತೆ. ಆದರೂ ದೇವರು ಅಬ್ರಹಾಮನನ್ನು ಕರೆದು ಅವನ ಸಂತತಿಯ ಮುಖಾಂತರ ಮುರಿದುಹೋದ ಸಂಬಂಧವನ್ನು ಕ್ರಿಸ್ತನಲ್ಲಿ ಪುನಃಸ್ಥಾಪಿಸುವ ವಾಗ್ದಾನವನ್ನು ಸಜೀವವಾಗಿಟ್ಟನು.